( ದಿ:06/08/2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು )

ಪಿ.ಡಬ್ಲ್ಯೂ.1 ರವರ ಪಾಟೀ ಸವಾಲು:- ಶ್ರೀ.ಸಿ.ವಿ.ಎನ್.ವಕೀಲರಿಂದ

ನನ್ನ ತಂದೆ ಹೆಸರು ಚನ್ನೇಗೌಡ @ ಅಣ್ಣೇಗೌಡ. ನಮ್ಮ ತಂದೆಗೆ 4 ಜನ ಮಕ್ಕಳು. 1 ರಿಂದ 3 ನೇ ವಾದಿಯರು, ಮಂಜೇಗೌಡ ಎನ್ನುವವರು ಮೃತಪಟ್ಟಿರುತ್ತಾರೆ. ಮಂಜೇಗೌಡರಿಗೆ ಮದುವೆ ಆಗಿತ್ತು, ಮಕ್ಕಳು ಇರಲಿಲ್ಲ. ನಮ್ಮ ತಂದೆಗೆ ಇಬ್ಬರು ಹೆಣ್ಣು ಮಕ್ಕಳು. ಜಯಮ್ಮ, ತಾಯಮ್ಮ. ತಾಯಮ್ಮ ಮೃತಪಟ್ಟಿರುತ್ತಾರೆ. ಅವರ ಗಂಡ ಬದುಕಿರುತ್ತಾರೆ. ಅವರಿಗೆ 4 ಜನ ಹೆಣ್ಣು ಮಕ್ಕಳು. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ನಿಪಿ-4 ಮತ್ತು 5 ರಲ್ಲಿ ರಂಗೇಗೌಡ ಬಿನ್ ಬಸವೇಗೌಡ ಎಂದರೆ ಪ್ರತಿವಾದಿಯ ತಂದೆ ಎಂದರೆ ಸರಿ. ದಾವಾದ ಆಸ್ತಿಗಳು ಈ ಮೊದಲು ಪ್ರತಿವಾದಿಯ ತಂದೆಗೆ ಸೇರಿದ ಆಸ್ತಿಗಳು ಎಂದರೆ ಸರಿ. ರಂಗೇಗೌಡ ಮೃತಪಟ್ಟ ನಂತರ ದಾವಾದ ಆಸ್ತಿಗಳು ಪ್ರತಿವಾದಿಯ ಹಕ್ಕು ಮತ್ತು ಸ್ವಾಧೀನಾನುಭವದಲ್ಲಿ ಇರುತ್ತದೆ ಎಂದರೆ ಸುಳ್ಳು. ಪ್ರತಿವಾದಿ ಅವರ ತಂದೆ ಮೃತಪಟ್ಟಾಗ ಖಾತೆ ಬದಲಾವಣೆ ಮಾಡಿಸಿಕೊಳ್ಳಲು ನಾಡ ಕಛೇರಿಗೆ ಅರ್ಜಿ ಕೊಟ್ಟಾಗ ನಾನು ತಕರಾರು ಮಾಡಿರುತ್ತೇನೆ ಎಂದರೆ ಸರಿ. ನಾಡಕಛೇರಿಯಲ್ಲಿ ತೀರ್ಮಾನ ಆಗುವ ಮೊದಲೇ ಈ ದಾವೆ ಸಲ್ಲಿಸಿದೆವು ಎಂದರೆ ಸರಿಯಲ್ಲ. ಸಿವಿಲ್ ವ್ಯಾಜ್ಯ ಚಾಲ್ತಿಯಲ್ಲಿ ಇರುವುದರಿಂದ ನಮಗೆ ಖಾತೆ ಮಾಡಲು ಬರುವುದಿಲ್ಲ ಎಂದು ನಾಡಕಛೇರಿಯವರು ಹೇಳಿರುತ್ತಾರೆ ಎಂದರೆ ಸುಳ್ಳು. ದಾವಾದ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾದ ಆಸ್ತಿ ಈಗಲೂ ಸಹ ಪ್ರತಿವಾದಿಯ ಹಕ್ಕು ಸ್ವಾಧೀನಾನುಭವದಲ್ಲಿ ಇದೆ ಎಂದರೆ ಸುಳ್ಳು.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

( ಶ್ರೀ.ಯೋಗೇಶ್ )
ಸಿವಿಲ್ ನ್ಯಾಯಾಧೀಶರು, ಅರಕಲಗೂಡು